> ಇತ್ತೀಚಿನ ವರ್ಷಗಳಲ್ಲಿ ಕೆಲ ಸಾಂಕ್ರಾಮಿಕ ರೋಗಗಳು ನಿಯಂತ್ರಣಕ್ಕೆ ಬರುತ್ತಿವೆ. ಆದರೆ ಬದಲಾದ ಜೀವನ ಶೈಲಿಯಿಂದ ಅಸಾಂಕ್ರಾಮಿಕ ರೋಗಗಳು ಹೆಚ್ಚುತ್ತಿವೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಆಯುಷ್ಮಾನ್ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ನೆರವಾಗಲಿವೆ. ಈ ಕೇಂದ್ರಗಳಲ್ಲಿ ಈಗಾಗಲೇ 7 ರೀತಿಯ ಆರೋಗ್ಯ ಸೇವೆಗಳು ಲಭ್ಯ ಇವೆ. ಅವನ್ನು 12ಕ್ಕೆ ಹೆಚ್ಚಿಸಿ, ಕ್ಷಯ, ಕುಷ್ಟರೋಗಗಳ ತಪಾಸಣೆ, ಆಹಾರ ಪರಿಶೀಲನೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.
>
> **-ಡಾ. ಓಂಪ್ರಕಾಶ್ ಪಾಟೀಲ್,**
> ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿರ್ದೇಶಕರು





ಆರೋಗ್ಯವಂತರಾಗಿರಬೇಕು. 2022ನೇ ವರ್ಷದೊಳಗೆ ದೇಶದಲ್ಲಿನ ಎಲ್ಲ ಜನರಿಗೂ ಮಾನಸಿಕ ಆರೋಗ್ಯ ಸೇವೆ ಒದಗಿಸುವುದು ಕೇಂದ್ರ ಸರಕಾರದ ಗುರಿಯಾಗಿದೆ. ಈ ನಿಟ್ಟಿನಲ್ಲಿ ವೈದ್ಯರಿಂದ ಅಗತ್ಯ ಮಾರ್ಗದರ್ಶನ ನೀಡಲಾಗುತ್ತದೆ.

## ನವಜಾತ ಶಿಶು ಆರೈಕೆ

ಪ್ರತಿ ನವಜಾತ ಶಿಶುವಿಗೆ ಹುಟ್ಟಿದ ತಕ್ಷಣ ಮತ್ತು ಮೊದಲ 28 ದಿನಗಳವರೆಗೆ ಕೆಲವು ಅಗತ್ಯ ಆರೈಕೆ ಅವಶ್ಯಕವಾಗಿರುತ್ತದೆ. ಇದು ಬಹಳ ಮುಖ್ಯ ಏಕೆಂದರೆ ಒಂದು ವರ್ಷದಲ್ಲಿ ಸಾಯುತ್ತಿರುವ ಪ್ರತಿ 10 ಮಕ್ಕಳಲ್ಲಿ 5 ಮಕ್ಕಳು ಮೊದಲ 28 ದಿನ ತುಂಬುವುದರೊಳಗೆ ಸಾಯುತ್ತಿದ್ದಾರೆ. ಹಾಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ಎಲ್ಲ ಮಹಿಳೆಯರು ಮತ್ತು ಶಿಶುಗಳಿಗೆ ಹೆರಿಗೆಯ ಮೊದಲು ಮತ್ತು ಅನಂತರ ಉತ್ತಮ ಗುಣಮಟ್ಟದ ಆರೈಕೆ ಒದಗಿಸುವುದು.
- ನವಜಾತ ಶಿಶುವಿನ ಆರೈಕೆಯಲ್ಲಿ ಕೌಶಲ ಹೊಂದಿರುವ ಆರೋಗ್ಯ ಕಾರ್ಯಪಡೆ, ವಿಶೇಷವಾಗಿ ವೈದ್ಯಕೀಯ ಮತ್ತು ಶುಶ್ರೂಷಕಿಯರ ಶೈಕ್ಷಣಿಕ ಹಾಗೂ ಶುಶ್ರೂಷಕ ಕ್ರಮವನ್ನು ಬಲಪಡಿಸುವತ್ತ ಗಮನ.
- ತೀವ್ರ ಕಡಿಮೆ ತೂಕದ ಮತ್ತು ಅನಾರೋಗ್ಯವುಳ್ಳ ನವಜಾತ ಶಿಶುಗಳು ಆರಂಭಿಕ, ಅಗತ್ಯವಾದ ನವಜಾತ ಆರೈಕೆ ಸೇರಿದಂತೆ ಪೋಷಣೆಯ ಮತ್ತು ಸುರಕ್ಷತೆ, ಸ್ಪಂದಿಸುವ

## ಕಾರ್ಯಕ್ರಮ ಅಧ್ಯಯನ ಕೇಂದ್ರಗಳು

- ಕೆ.ಸಿ.ಜಿ ಆಸ್ಪತ್ರೆ, ಬೆಂಗಳೂರು
- ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು
- ಸಾರ್ವಜನಿಕ ಆಸ್ಪತ್ರೆ, ವಿಜಯಪುರ
- ಸಾರ್ವಜನಿಕ ಆಸ್ಪತ್ರೆ, ಬಾಗಲಕೋಟೆ
- ಸಾರ್ವಜನಿಕ ಆಸ್ಪತ್ರೆ, ಬಳ್ಳಾರಿ
- ಸಾರ್ವಜನಿಕ ಆಸ್ಪತ್ರೆ, ತುಮಕೂರು
- ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು
- ರಾಯಚೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ರಾಯಚೂರು
- ಬೀದರ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೀದರ್
- ಕಲಬುರ್ಗಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಕಲಬುರ್ಗಿ
- ಕೊಪ್ಪಳ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಕೊಪ್ಪಳ
- ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
- ಹಾಸನ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಹಾಸನ